

> ಮರಳಿ ಬಾ ಮನ್ವಂತರವೇ ಕಂಬನಿಗಳ ಬಳಿಗೆ
> ಮರಳಿಸು ಹೊಸ ಚೇತನವ ಬಳಲಿದ ಮನಗಳಿಗೆ
> ತೋರು ಬಾ ಮನ್ವಂತರವೇ ಭಾವಕೆ ಉಸಿರನ್ನು
> ಬರಡು ಹೃದಯಗಳಿಗೆ ಜೀವದ ಹಸಿರನ್ನು
>
> -ಟಿ.ಎನ್. ಸೀತಾರಾಮ್ ನಿರ್ದೇಶನದ
> 'ಮನ್ವಂತರ' ಧಾರಾವಾಹಿಯ ಶೀರ್ಷಿಕೆ ಗೀತೆ

# ಹಿಂದಿರುಗಿ ನೋಡಬಾರದ ಹಾದಿಯನ್ನು ಹೊರಳಿ ನೋಡಿದಾಗ ಕಂಡ ಬಿಂಬಗಳು

2020. ವಿಶ್ವವನ್ನು ದುರಂತ ಸ್ವಪ್ನದಂತೆ ಕಾಡಿದ ವರ್ಷ. ಶತಮಾನಗಳಿಂದ ರೂಢಿಸಿಕೊಂಡು ಬಂದಿದ್ದ ಸಾಮಾಜಿಕ ನಂಬಿಕೆಗಳು ತಲೆಕೆಳಗಾದ ವರ್ಷ. ಜಾಗ್ರತೆಯಿಂದ ಕಟ್ಟಿಕೊಂಡ ಬದುಕಿನ ಬುನಾದಿ ಅಲ್ಲಾಡಿದ ವರ್ಷ. ನಮ್ಮ ಕೈಗಳನ್ನು ನಾವೇ ನಂಬದಂತೆ ಮಾಡಿದ, ನಮ್ಮ ಮುಖವನ್ನು ನಾವೇ ಮರೆಸಿಕೊಳ್ಳುವಂತೆ ಮಾಡಿದ ವರ್ಷ. ಕೊರೊನಾ, ಕೋವಿಡ್ 19 ಹೊರತುಪಡಿಸಿ ಉಳಿದುದೆಲ್ಲ ಹಿನ್ನೆಲೆಗೆ ಸರಿದ ವರ್ಷ. ಬಹಳಷ್ಟು ಜನರು ತಮ್ಮ ಜೀವಿತಕಾಲದಿಂದ ಅಳಿಸಲು ಬಯಸುವ 2020, ನಾವು ಮರೆಯಬಾರದ, ಮನನ ಮಾಡಿಕೊಳ್ಳಲೇಬೇಕಾದ ಪಾಠಗಳನ್ನೂ ಎದುರಿಗಿಟ್ಟಿದೆ. ಹೊಸಿಲಲ್ಲಿ ನಿಂತಿರುವ ಹೊಸ ವರ್ಷವನ್ನು ಆಸೆಕಂಗಳಿಂದ ನೋಡುತ್ತ, ತೆರೆಮರೆಗೆ ಸರಿಯುತ್ತಿರುವ ಅನ್ಯಾದೃಶ ವರ್ಷವನ್ನು ವಿಷಾದದಿಂದ ನೋಡುವಾಗ ಕಂಡ ಇಪ್ಪತ್ತು ಸಂಗತಿಗಳ 'ಟ್ವೆಂಟಿ20' ಕಥನ 'ಸುಧಾ' ವರ್ಷಾಂತ್ಯ ವಿಶೇಷ.

■ ಪ್ರವೀಣ ಕುಲಕರ್ಣಿ, ಬಿ. ಸುಮಾ, ಕಾವ್ಯಶ್ರೀ ಎನ್. ಮತ್ತು 'ಸುಧಾ' ಬಳಗ